
ಸಾಹಿತ್ಯವನ್ನು ಓದುತ್ತಲೇ ಗಂಗಾಧರ ಚಿತ್ತಾಲರ ಕಾವ್ಯಕ್ಕೆ ಮಾರುಹೋದವರಿದ್ದಾರೆ.

ಅಡಿಗರು ನಮಗೆ ಗಂಭೀರ ಓದಿನ ಬಗ್ಗೆ ಎಷ್ಟೊಂದು ಮಾರ್ಮಿಕ ಸೂಕ್ಷ್ಮಗಳನ್ನು ಕಲಿಸಿದರು. ಹಾಗೆಯೇ ಮಾಸ್ತಿ, ಕಾರಂತ, ಕುವೆಂಪು ಮುಂತಾದವರ ಮುಂದೆ ಕೂತಾಗ ಕೂಡ ಸಾಹಿತ್ಯದ ಓದು ಶ್ರೀಮಂತವಾಗಲು ಸಾಧ್ಯವಾಗಿದೆ. ಅದೇ ರೀತಿಯಲ್ಲಿ ನಿರಂಜನ ಅವರ ಮುಂದೆ ಕೂತಾಗ – ಅವರು ಅಡಿಗರು, ಲಂಕೇಶ್, ಅನಂತಮೂರ್ತಿ ಮುಂತಾದ ನವ್ಯ ಲೇಖಕರ ಕುರಿತು ಎಂಥ ಸಿನಿಕ ಧೋರಣೆಯನ್ನು ಹೊಂದಿದ್ದರು. ಆದರೆ ಡಾ. ಅನುಪಮಾ ಅವರು ಎಲ್ಲದಕ್ಕೂ ವಿಶಾಲ ಮನಸ್ಸಿನವರು ಆಗಿದ್ದರು. ಇಂದು ಬಹುಪಾಲು ಮಂದಿ ಅತ್ಯಂತ ಚೆನ್ನಾಗಿ ಬರೆಯುತ್ತಿದ್ದರೆ ಅದಕ್ಕೆ ನವ್ಯ ಸಾಹಿತ್ಯದ ಕೊಡುಗೆ ಸ್ವಲ್ಪ ಮಟ್ಟಿಗಿದೆ ಎಂದು ಭಾವಿಸುವೆ. ಇದು ನನ್ನ ಪ್ರಾಮಾಣಿಕ ಅನ್ನಿಸಿಕೆ. ಕೆ.ಎಸ್.ನ. ಅವರಂಥ ಬಹುದೊಡ್ಡ ರಮ್ಯಕವಿ ಯಾಕೆ 'ತೆರೆದ ಬಾಗಿಲು' ರೀತಿಯ ಅದ್ಭುತ ಕಾವ್ಯ ಸಂಕಲನವನ್ನು ಕೊಟ್ಟರು ಎನ್ನುವುದನ್ನು ಯೋಚಿಸಬೇಕು.

ನಾವು ಬಂಡಾಯ ಸಾಹಿತ್ಯ ಸಂಘಟನೆಯನ್ನು ಪ್ರಾರಂಭಿಸಿದಾಗ ಸಾಕಷ್ಟು ಚರ್ಚೆಯಾದ ಮೇಲೆ 'ಜೀವವಿರೋಧಿ' ಲೇಖಕರು ಎಂಬ ಧೋರಣೆಗೆ ಒತ್ತುಕೊಟ್ಟಾಗ, ನಾನು ಪ್ರತಿಭಟಿಸಿ ಹೊರಗೆ ಬಂದು ಬಹಳಷ್ಟು ವಿಷಾದದಿಂದ ನರಳಿದ್ದೇನೆ. ಆ ಸಮಯದಲ್ಲಿ ಲಂಕೇಶ್ ಅವರು ಧೈರ್ಯ ತುಂಬಿದರು. ಡಿ.ಆರ್. ನಾಗರಾಜ್ ಕೂಡ ಬಂಡಾಯದಲ್ಲಿ ಮುಂದುವರಿಯಲಿಲ್ಲ. ಅವರಿಗೆ ಕೊನೆಯವರೆಗೂ ಜೀವವಿರೋಧಿ ಎಂಬುದು ಸಾಕಷ್ಟು ಮಾನಸಿಕವಾಗಿ ಹಿಂಸೆಕೊಟ್ಟಿದೆ. ಲಂಕೇಶ್ ಮತ್ತು ಅನಂತಮೂರ್ತಿಯವರ ಗೇಲಿಗೆ ಡಿ.ಆರ್. ಒಳಗಾಗಿದ್ದ.

ನಮ್ಮ ಸಾಹಿತ್ಯ ಸಂದರ್ಭದಲ್ಲಿ ಎಂತೆಂಥದೋ ಮಹತ್ವದ ವಾಗ್ವಾದಗಳು ನಡೆದಿವೆ. ಅವೆಲ್ಲವೂ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಂಬಂಧಿಸಿದ ವಿಷಯ ಎಂದು ಭಾವಿಸಬೇಕಾಗುತ್ತದೆ. ಇದಕ್ಕೆ ಪೂರಕವಾದ ಸಂಗತಿಯೊಂದನ್ನು ಉದಾಹರಿಸಲು ಬಯಸುವೆ. ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಅಭಿನಂದನಾ



ಕಾರ್ಯಕ್ರಮವಿತ್ತು. ಆಗ ಹಂಪನಾ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅಭಿನಂದನಾ ಭಾಷಣ ಮಾಡಲು ಬಸವರಾಜ ಕಟ್ಟೀಮನಿಯವರು ಬಂದಿದ್ದರು. ಅವರು ಮಾತಾಡುವಾಗ 'ನಾನು ಸುಮಾರು ವರ್ಷಗಳ ಹಿಂದೆ ಒಂದು ಪತ್ರಬರೆದಿದ್ದೆ ನಿಮಗೆ' ಎಂದು ಪ್ರಾರಂಭಿಸಿದರು. ಅದಕ್ಕೆ ಮಾಸ್ತಿಯವರು, 'ನಾನು ಇನ್ನೂ ಅದನ್ನು ತೆರೆದು ನೋಡಿಲ್ಲ. ದಯವಿಟ್ಟು ಅದನ್ನು ವಾಪಸ್ಸು ಕೊಡುವೆ. ತೆಗೆದುಕೊಂಡು ಹೋಗಿ' ಎಂದರು. ಅದಕ್ಕೆ ಕಟ್ಟೀಮನಿಯವರು ಸುಸ್ತಾಗಿದ್ದರು. ಇದನ್ನು ಮಾಸ್ತಿಯವರು ಅವರ ಮನೆಯಲ್ಲಿ ನನಗೆ ಹೇಳಿದ್ದರು.

ಇರಲಿ, ಬರಗೂರು ಅವರ ಲೇಖನ ನನ್ನಿಂದ ಏನೇನೋ ಬರೆಯಲು ಪ್ರೇರೇಪಿಸಿದೆ. ಇದನ್ನು ಬರೆಯುವ ಮುನ್ನ ಅನಂತಮೂರ್ತಿಯವರ 'ಸೂರ್ಯನ ಕುದುರೆ'ಯಂಥ ಕಥೆಯನ್ನು ಮತ್ತೊಮ್ಮೆ ಓದಿ ನನ್ನ ಬದುಕಿನ ಏಳು ಬೀಳುಗಳನ್ನು ಅವಲೋಕಿಸಿಕೊಳ್ಳುತ್ತಾ ಹೋಗಿರುವೆ. ಹಾಗೆಯೇ ಲಂಕೇಶ್ ಅವರು 'ಶೂದ್ರ, ಒಬ್ಬ ಲೇಖಕ ತನ್ನ ಬದುಕಿನಲ್ಲಿ ಇಂಥ ಒಂದು ಕಥೆ ಬರೆದರೆ ಸಾಕು' ಎಂದಿದ್ದು ನೆನಪಾಯಿತು.

●